ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl.NDPS 9/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಶಿವಪ್ರಸಾದ್ ಎನ್ | ಪಿ.ಡಬ್ಲ್ಯೂ. | 2 |
| ತಂದೆಯ ಹೆಸರು | ಃ | ವೀರಭದ್ರಯ್ಯ ಎಮ್ | ಸಿ.ಡಬ್ಲ್ಯೂ. | 1 |
| ವಯಸ್ಸು | ಃ | 42 ವರ್ಷ | | |
| ಉದ್ಯೋಗ | ಃ | ಪೋಲೀಸ್ ನಿರಿಕ್ಷಕರು, ರಾಜ್ಯ ಗುಪ್ತವಾರ್ತೆ ಬೆಂಗಳೂರು | | |
| ವಾಸ ಸ್ಥಳ | ಃ | ಬೆಂಗಳೂರು | | |

ದಿ.07.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಕಲಂ 299 ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷ್ಯವನ್ನು ದಾಖಲಾಯಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ.)</u> ಃ

1. ದಿ.14.11.2019 ರಿಂದ ದಿ.10.01.2021 ರವರೆಗೆ ಹರಿಹರ ವೃತ್ತದಲ್ಲಿ ಸಿಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.12.09.2020 ರಂದು ಬೆಳಿಗ್ಗೆ 10.00 ಗಂಟೆಗೆ ನಾನು ಕಛೇರಿಯಲ್ಲಿದ್ದಾಗ ಹರಿಹರ-ಶಿವಮೊಗ್ಗ ರಸ್ತೆಯ ಭರಣಿ ಹೋಟೆಲ್ ಮುಂಬಾಗದಲ್ಲಿ ಯಾರೋ 3 ಜನ ಗಾಂಜಾ ಸೊಪ್ಪನ್ನು ಮಾರಾಟ ಮಾಡುತ್ತಿದ್ದಾರೆಂದು ಖಚಿತ ಮಾಹಿತಿ ಬಂದಿದ್ದು, ಸದರಿ ಮಾಹಿತಿಯನ್ನು ಪರಿಶೀಲಿಸಿ ಈ ಬಗ್ಗೆ ಪ್ರಕರಣ ದಾಖಲಿಸಿ ದಾಳಿ ಮಾಡಲು ಅನುಮತಿ ಕೊರಿ ಜಿಲ್ಲಾ ಪೋಲೀಸ್ ಅಧಿಕ್ಷಕರು ದಾವಣಗೆರೆ ಇವರಿಗೆ ನಿವೇದಿಸಿಕೊಂಡಿದ್ದು, ಸದರಿಯವರು ಅನುಮತಿಯನ್ನು ನೀಡಿರುತ್ತಾರೆ.

3. ಪ್ರಕರಣದ ತನಿಖೆಗಾಗಿ ಇಬ್ಬರು ಪಂಚರನ್ನು ಕಳುಹಿಸಿಕೊಡಲು ನಗರಸಭೆಗೆ ಮನವಿ ಮಾಡಿರುತ್ತೇನೆ. ಅದೇ ಸಮಯದಲ್ಲಿ ತಹಶಿಲ್ದಾರ ಹರಿಹರ ತಾಲ್ಲೂಕು ಇವರಿಗೂ ಪತ್ರಾಂಕಿತ ಅಧಿಕಾರಿಯಾಗಿ ನಮ್ಮೊಂದಿಗೆ ಸಹಕರಿಸಲು ಮನವಿ ಮಾಡಿರುತ್ತೇನೆ. ಅದೇ ದಿನ ಮಧ್ಯಾಹ್ನ 12.00 ಗಂಟೆಗೆ ಠಾಣಾಧಿಕಾರಿಗಳು ಹರಿಹರ ಗ್ರಾಮಾಂತ ಪೋಲೀಸ್ ಠಾಣೆ ಇವರಿಗೆ ಗಾಂಜಾ ಸೊಪ್ಪನ್ನು

ಮಾರಾಟ ಮಾಡುವ ಮಾಹಿತಿ ಬಗ್ಗೆ ಪ್ರಕರಣ ದಾಖಲಿಸಲು ದೂರನ್ನು ನೀಡಿರುತ್ತೇನೆ. ದೂರನ್ನು **ನಿಪಿ.6** ಎಂದು ಸಾಕ್ಷಿಯ ಸಹಿಯನ್ನು **ನಿಪಿ.6(ಎ)** ಎಂದು ಗುರುತಿಸಲಾಯಿತು. ಜಿಲ್ಲಾ ವರಿಷ್ಟಾಧಿಕಾರಿಯವರು ನೀಡಿರುವ ಅನುಮತಿ ಪತ್ರವನ್ನು **ನಿಪಿ.7** ಎಂದು ಗುರುತಿಸಲಾಯಿತು.

4. ಅದೇ ದಿನ ಮಧ್ಯಾಹ್ನ 12.30 ಗಂಟೆಗೆ ಪಂಚರಾದ ಚಾಸಾ.2 ಮತ್ತು 3 ರವರ ಹಾಗೂ ತಹಶಿಲ್ದಾರ ರವರು ನನ್ನ ಕಛೇರಿಗೆ ಹಾಜರಾಗಿ, ಸದರಿಯವರು ಪರಸ್ಪರ ಪರಿಚಯಿಸಿಕೊಂಡು, ಬಂದ ಖಚಿತ ಮಾಹಿತಿ ಬಗ್ಗೆ ಅವರಿಗೆ ವಿವರಿಸಿ ಪ್ರಕರಣದ ಮುಂದಿನ ತನಿಖೆಗೆ ಸಹಕರಿಸಲು ಪಂಚರಿಗೆ ನೋಟಿಸನ್ನು ಜಾರಿ ಮಾಡಿರುತ್ತೇನೆ.

5. ನಂತರ ಇಲಾಖಾ ಸಿಬ್ಬಂದಿಯವರಾದ ಚಾಸಾ.5 ರಿಂದ ಚಾಸಾ.13 ರವರೊಂದಿಗೆ, ತೂಕದ ಯಂತ್ರ, ಲ್ಯಾಪ್ ಟಾಪ್, ಪ್ರಿಂಟರ್ ಇವುಗಳೊಂದಿಗೆ ಸರ್ಕಾರಿ ವಾಹನದೊಂದಿಗೆ ಮಧ್ಯಾಹ್ನ 12.55 ಗಂಟೆಗೆ ಠಾಣೆಯಿಂದ ಹೊರಟು ಹರಿಹರ-ಶಿವಮೊಗ್ಗ ಹೆದ್ದಾರಿ ಪಕ್ಕದಲ್ಲಿರುವ ಇಂಡಿಯನ್ ಡಾಬಾದ ಹತ್ತಿರ ನಿಲ್ಲಿಸಿ, ಸಿಬ್ಬಂದಿ ಹಾಗೂ ಅಧಿಕಾರಿಗಳ ಸ್ವ ಅಂಗಶೋಧನೆ ಮಾಡಿಕೊಂಡಿದ್ದು, ನಮ್ಮಲ್ಲಿ ಯಾವುದೇ ರೀತಿಯ ಮಾದಕ ವಸ್ತುಗಳಾಗಲೀ ಗಾಂಜಾ ಆಗಲೀ ಇಲ್ಲವೆಂದು ಖಚಿತ ಪಡಿಸಿಕೊಂಡು, ಅಲ್ಲಿಂದ ಪಂಚರು, ತಹಶಿಲ್ದಾರ ಮತ್ತು ಸಿಬ್ಬಂದಿಯವರೊಂದಿಗೆ ಸ್ವಲ್ಪ ದೂರದಲ್ಲಿ ನಿಂತು, ಭರಣಿ ಹೊಟೆಲ್ ಪರಿಕ್ಷಿಸಲಾಗಿ ಯಾರೋ 3 ಜನ ಒಂದು ಆಟೋ ಸಮೇತ ನಿಂತುಕೊಂಡಿರುವುದು ಕಂಡು ಬಂದಿದ್ದು, ಸದರಿ ಮೂವರು ಕಾಲೇಜ್ ಬ್ಯಾಗ್ ಗಳನ್ನು ಹಿಡಿದುಕೊಂಡು ನಿಂತಿರುವುದು ಕಂಡು ಬಂದಿರುತ್ತದೆ.

6. ನಂತರ ಸಿಬ್ಬಂದಿಯವರ ಸಹಾಯದಿಂದ ಅವರನ್ನು ಸುತ್ತುವರಿದು ಹಿಡಿದುಕೊಂಡು, ಅವರುಗಳನ್ನು ವಿಚಾರಿಸಲಾಗಿ ತಮ್ಮ ಹೆಸರು 1. ರಾಹುಲ್, 2. ಮಲ್ಲಿಕಾರ್ಜುನ್ ಮತ್ತು 3. ಪ್ರಮೋದ್ ಎಂದು ತಿಳಿಸಿದ್ದು, ತಾವು ಶಿವಮೊಗ್ಗ ಜಿಲ್ಲೆ ಭದ್ರಾವತಿಯವರು ಎಂದು ತಿಳಿಸಿದರು. ನಂತರ ಪಂಚರು ಹಾಗೂ ತಹಶಿಲ್ದಾರ ರವರ ಸಮಕ್ಷಮ ನಿಮ್ಮಲ್ಲಿರುವ ಬ್ಯಾಗಿನಲ್ಲಿ ಏನು ಇದೆ ಎಂದು ಹರಿಹರ ತಹಶಿಲ್ದಾರ

ರಾಮಚಂದ್ರಪ್ಪ ರವರು ಕೇಳಲಾಗಿ, ಹಾಗೂ ನಾನು ಪತ್ರಾಂಕಿತ ಅಧಿಕಾರಿಯಾಗಿದ್ದು ನಿಮ್ಮ ಅಂಗಶೋಧನೆ ಮಾಡಲು ಒಪ್ಪಿಗೆ ಇದೆಯೇ ಎಂದು ಕೇಳಲಾಗಿ ಮೂರು ಜನರು ಒಪ್ಪಿಗೆ ಇದೆ ಎಂದು ಹೇಳಲಾಗಿ ತಹಶಿಲ್ದಾರ್ ರವರು ಈ ಬಗ್ಗೆ ನೋಟೀಸ್ ಜಾರಿ ಮಾಡಿ ಸಹಿ ಪಡೆದಿರುತ್ತಾರೆ.

7. ನಂತರ 3 ಜನರ ಪೈಕಿ 1 ನೇ ಆರೋಪಿತನ ಬಳಿ ಇರುವ ಪಾಸ್ಟ್ ಟ್ರಾಕ್ (Fastrack) ಕಾಲೇಜ್ ಬ್ಯಾಗನ್ನು ಪರಿಕ್ಷಿಸಿ ನೋಡಲಾಗಿ ಅದರಲ್ಲಿ ಪ್ಲಾಸ್ಟಿಕ್ ಕವರ್ ಇದ್ದು, ಸೊಪ್ಪಿನ ತರವಾಗಿದ್ದು ಕಂಡು ಬಂದು ಘಾಟುವಾಸನೆ ಬರುತ್ತಿದ್ದು, ಅದನ್ನು ಸೂಕ್ಷ್ಮವಾಗಿ ಪರಿಕ್ಷಿಸಲಾಗಿ ಅದರಲ್ಲಿ ಹೂವು, ಮೊಗ್ಗು, ಸೊಪ್ಪು ಕಂಡು ಬಂದಿದ್ದು, ಇದು ಗಾಂಜಾ ಸೊಪ್ಪು ಎಂದು ತಿಳಿದು ಬಂದಿರುತ್ತದೆ. ನಂತರ ಅದನ್ನು ನಮ್ಮ ಜೊತೆ ತಂದಿದ್ದ ಯಂತ್ರದಲ್ಲಿ ಪಂಚರ ಸಮಕ್ಷಮ ಅದರ ನಿಖರತೆಯನ್ನು ಪರಿಕ್ಷಿಸಲಾಗಿ ಸರಿಯಾಗಿದೆ ಎಂದು ಧೃಡಿಕರಿಸಿ ಪ್ಲಾಸ್ಟಿಕ್ ಕವರ್ ನಲ್ಲಿರುವ ಗಾಜಾ ಸೊಪ್ಪನ್ನು ತೂಕ ಮಾಡಲಾಗಿ 2 ಕೆ.ಜಿ. 45 ಗ್ರಾಂ ಇರುತ್ತದೆ. ನಂತರ ಗಾಂಜಾ ಸೊಪ್ಪನ್ನು ಬಿಳಿ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಬಿ.ಬಿ. ಎಂದು ಸೀಲ್ ಮಾಡಿ ಕ್ರಮ ಸಂಖ್ಯೆ.1 ಎಂದು ಗುರುತಿಸಲಾಯಿತು.

8. ನಂತರ ಮಲ್ಲಿಕಾರ್ಜುನ್ (2 ನೇ ಆರೋಪಿ) ಇತನ ಬಳಿ ಇದ್ದ ಬೂದು ಬಣ್ಣದ ಕಾಲೇಜ್ ಬ್ಯಾಗನ್ನು ಪರಿಶೀಲಿಸಿ ನೋಡಲಾಗಿ ಅದರೊಳಗೆ ಖಾಕಿ ಬಣ್ಣದ ಟೇಪ್ ನಿಂದ ಸುತ್ತಲ್ಪಟ್ಟ ಅರೇ ಬರೆ ಒಣಗಿದ ಸೊಪ್ಪಿನ ತರವಾಗಿದ್ದು ಕಂಡು ಬಂದು ಘಾಟುವಾಸನೆ ಬರುತ್ತಿದ್ದು, ಅದನ್ನು ಸೂಕ್ಷ್ಮವಾಗಿ ಪರಿಕ್ಷಿಸಲಾಗಿ ಅದರಲ್ಲಿ ಹೂವು, ಮೊಗ್ಗು, ಸೊಪ್ಪು ಕಂಡು ಬಂದಿದ್ದು, ಇದು ಗಾಂಜಾ ಸೊಪ್ಪು ಎಂದು ತಿಳಿದು ಬಂದಿರುತ್ತದೆ. ಇದು ಗಾಂಜಾ ಸೊಪ್ಪು ಎಂದು ತಿಳಿದು ಬಂದಿರುತ್ತದೆ. ಗಾಜಾ ಸೊಪ್ಪನ್ನು 2 ಕೆ.ಜಿ. 40 ಗ್ರಾಂ ಇತ್ತು. ನಂತರ ಗಾಂಜಾ ಸೊಪ್ಪನ್ನು ಬಿಳಿ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಬಿ.ಬಿ. ಎಂದು ಸೀಲ್ ಮಾಡಿ ಕ್ರಮ ಸಂಖ್ಯೆ.2 ಎಂದು ಗುರುತಿಸಲಾಯಿತು.

9. ನಂತರ ಪ್ರಮೋದ (3 ನೇ ಆರೋಪಿ) ಇತನನ್ನು ಅಂಗಶೋಧನೆ ಮಾಡಿದಾಗ ಇತನ ಪ್ಯಾಂಟಿನ

ಬಲಜೇಬಿನಲ್ಲಿ ಸಣ್ಣ ಸಣ್ಣ 11 ಪಾರದರ್ಶಕ ಪ್ಲಾಸ್ಟಿಕ್ ಕವರ್ ಗಳು ಇದ್ದು, ಅವುಗಳಲ್ಲಿ ಹೂವು, ಮೊಗ್ಗು, ಬೀಜಗಳಿಂದ ಕೂಡಿದ ಗಾಂಜಾ ಸೊಪ್ಪುಗಳು ಇದ್ದು, ಈ ಪ್ಯಾಕೇಟ್ ಗಳನ್ನು ಏಕೆ ಇಟ್ಟುಕೊಂಡಿದ್ದೀರಿ ಎಂದು ತಹಶೀಲ್ದಾರರವರು ಕೇಳಿದಾಗ ಇವುಗಳನ್ನು ಮಾರಾಟ ಮಾಡುವ ಸಲುವಾಗಿ ಇಟ್ಟುಕೊಂಡಿರುತ್ತೇವೆಂದು ಹೇಳಿದರು. ಸದರಿ 11 ಕವರ್ ನಲ್ಲಿರುವ ಗಾಂಜಾವನ್ನು ತೂಕ ಮಾಡಲಾಗಿ ಅದು 80 ಗ್ರಾಂ ಇತ್ತು. ಮತ್ತು 11 ಕವರ್ ಗಳನ್ನು ಬಿಳಿ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಬಿ.ಬಿ. ಎಂದು ಸೀಲ್ ಮಾಡಿ ಕ್ರಮ ಸಂಖ್ಯೆ.3 ಎಂದು ಗುರುತಿಸಲಾಯಿತು.

10. ನಂತರ ಪ್ರಮೋದ ಇತನ ಎಡಜೇಬನ್ನು ಪರಿಶೀಲಿಸಲಾಗಿ 23 ಸಣ್ಣ ಸಣ್ಣ ಖಾಲಿ ಪಾರದರ್ಶಕ ಕವರ್ ಗಳು ಇರುತ್ತದೆ. ಇವುಗಳನ್ನು ಪ್ರತ್ಯೇಕವಾಗಿ ಬಿಳಿ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಬಿ.ಬಿ. ಎಂದು ಸೀಲ್ ಮಾಡಿರುತ್ತೇವೆ. ಮತ್ತು ಎರಡು ಬ್ಯಾಗ್ ಗಳನ್ನು ಪ್ರತ್ಯೇಕವಾಗಿ ಬಿಳಿ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಬಿ.ಬಿ. ಎಂದು ಸೀಲ್ ಮಾಡಿರುತ್ತೇವೆ.

11. ನಂತರ ಎಲ್ಲಾ ಬಿಳಿ ಬಟ್ಟೆ ಚೀಲಗಳಿಗೆ ಪಂಚರು ಮತ್ತು ತಹಶಿಲ್ದಾರ ಮತ್ತು ನಮ್ಮಗಳ ಸಹಿ ಇರುವ ಚೀಟಿಗಳನ್ನು ಅಂಟಿಸಲಾಯಿತು. ನಂತರ ಮೂರು ಜನರು ಗಾಂಜಾ ಮಾರಾಟ ಮಾಡುವ ಉದ್ದೇಶದಿಂದ ಆಟೋ ತೆಗೆದುಕೊಂಡು ಬಂದಿರುವುದಾಗಿ ತಿಳಿಸಿರುತ್ತಾರೆ. ಆಟೋ ಪರಿಶೀಲಿಸಲಾಗಿ ಆಟೋ ಸಂಖ್ಯೆ ಕೆ.ಎ.14 ಬಿ.8176 ಬಜಾಜ್ ಕಂಪನಿಯ ಆಟೋ ಆಗಿರುತ್ತದೆ. ಸದರಿ ಆಟೋವನ್ನು ಮುಂದಿನ ತನಿಖೆಗಾಗಿ ನಮ್ಮ ವಶಕ್ಕೆ ಪಡೆದಿರುತ್ತೇನೆ.

12. ಅಮಾನತ್ತು ಪಡಿಸಿಕೊಂಡ ಒಟ್ಟು ಗಾಂಜಾ 4 ಕೆ.ಜಿ. 170 ಗ್ರಾಂ ಆಗಿರುತ್ತದೆ. ಪಂಚನಾಮೆಯನ್ನು ಮಧ್ಯಾಹ್ನ 1.30 ಗಂಟೆಯಿಂದ 03.15 ರವರೆಗೆ ನಮ್ಮೊಂದಿಗೆ ತಂದಿದ್ದ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿ ಪಂಚರ ಸಮಕ್ಷಮ ಅಲ್ಲಿಯೇ ಪಕ್ಕದಲ್ಲಿದ್ದ ಇಂಡಿಯನ್ ಡಾಬಾದಲ್ಲಿ ಕೇನನ್ ಪ್ರಿಂಟರ್ (ನಮ್ಮ ಠಾಣೆಯ ಪ್ರಿಂಟರ್) ನಿಂದ ಪ್ರಿಂಟ್ ತೆಗೆದು, ಪತ್ರಾಂಕಿತರು, ಪಂಚರು, ತಹಶಿಲ್ದಾರರು,

ನಮ್ಮ ಸಿಬ್ಬಂದಿಯವರು ಮತ್ತು ಆರೋಪಿತರು ಸಹಿ ಮಾಡಿರುತ್ತೇವೆ. ಸ್ಥಳ ಮತ್ತು ಅಮಾನತ್ತು ಪಂಚನಾಮೆಯನ್ನು ನಿಪಿ.8 ಎಂದು, **ನಿಪಿ.8** ರಲ್ಲಿ ಸಾಕ್ಷಿಯ ಸಹಿಯನ್ನು **ನಿಪಿ.8(ಎ)** ಎಂದು ಗುರುತಿಸಲಾಯಿತು.

13. ಪಂಚನಾಮೆಯ ಸಮಯದಲ್ಲಿ ಠಾಣೆಯ ಸಿಬ್ಬಂದಿಯವರ ಸಹಾಯದಿಂದ ಒಟ್ಟು 10 ಪೋಟೋ ಗಳ ಧೃಡಿಕೃತ ನಕಲುಗಳನ್ನು ಹಾಜರುಪಡಿಸಿದ್ದು (ಅಸಲು ಪೋಟೋಗಳು ಸ್ಪೆಷಲ್ ಕೇಸ್ ನಂ.9/2020 ರಲ್ಲಿ ಇದ್ದು) ಅವುಗಳನ್ನು **ನಿಪಿ.9** ರಿಂದ **ನಿಪಿ.18** ಎಂದು ಗುರುತಿಸಲಾಯಿತು. ನಿಪಿ.9 ರಿಂದ ನಿಪಿ.18 ರ ಹಲವಾರು ಪೋಟೋಗಳಲ್ಲಿ 3 ನೇ ಆರೋಪಿ ಇರುವುದು ಕಂಡು ಬರುತ್ತದೆ.

14. 1 ನೇ ಆರೋಪಿಯ ಬಳಿ ವಶಪಡಿಸಿಕೊಂಡ ಪಾಸ್ಟ್ ಟ್ರಾಕ್ (Fastrack) ಕೆಂಪು ಬಣ್ಣದ ಕಾಲೇಜ್ ಬ್ಯಾಗನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಬ್ಯಾಗನ್ನು **ಎಂ.ಓ.1** ಎಂದು, ENO ಅಂತಾ ಹೆಸರಿನ ಬೂದು ಬಣ್ಣದ ನೀಲಿ ಪಟ್ಟಿ ಇರುವ ಕಾಲೇಜ್ ಬ್ಯಾಗನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ಎಂ.ಓ.2** ಎಂದು, ರಾಹುಲ್ ಈತನ ಬಳಿ ದೊರೆತ ಪ್ಲಾಸ್ಟಿಕ್ ಕವರ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ಎಂ.ಓ.3** ಎಂದು ಮತ್ತು ಪ್ರಮೋದ್ ಈತನ ಬಳಿ ದೊರೆತ 23 ಖಾಲಿ ಪ್ಲಾಸ್ಟಿಕ್ ಕವರ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು **ಎಂ.ಓ.4** ಎಂದು ಗುರುತಿಸಲಾಯಿತು.

15. ಪಂಚನಾಮೆಯ ಸಮಯದಲ್ಲಿ ವಶಪಡಿಸಿಕೊಂಡ ವಸ್ತುಗಳು ಹಾಗೂ ವಾಹನ ಮತ್ತು ಆರೋಪಿತರೊಂದಿಗೆ ಠಾಣೆಗೆ ಹೋಗಿ ಚಾಸಾ.14 ರವರ ಮುಂದೆ ಹಾಜರುಪಡಿಸಿರುತ್ತೇನೆ. ಸದರಿ ದಾಳಿಯ ಸಮಯದಲ್ಲಿ ಭರಣಿ ಹೋಟೆಲ್ ಬೀಗ ಹಾಕಿರುತ್ತದೆ. ಆರೋಪಿತರನ್ನು ನೋಡಿದರೆ ನಾನು ಗುರುತಿಸುತ್ತೇನೆ. 3 ನೇ ಆರೋಪಿತನು ತಲೆ ಮರೆಸಿಕೊಂಡಿದ್ದು, ಆತನನ್ನು ನೋಡಿದರೆ ಗುರುತಿಸುತ್ತೇನೆ.

**<u>ಪಾಟೀ ಸವಾಲು :</u>** ಪ್ರಸ್ತುತ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .